**ಸಾಕ್ಷಿಯನ್ನು ದಿಃ 06.09.2025 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಜಿ.ಸಿ.ಎಸ್ ವಕೀಲರಿಂದಃ**

ನಾನು 9 ನೇ ತರಗತಿವರೆಗೆ ಓದಿರುತ್ತೇನೆ. ಅರ್ಜಿ ಸಲ್ಲಿಸುವಾಗ ನನ್ನ ಅತ್ತೆ ಇದ್ದರು. ಅರ್ಜಿ ಸಲ್ಲಿಸಿದ 6 ತಿಂಗಳಲ್ಲಿ ನನ್ನ ಅತ್ತೆ ತೀರಿಕೊಂಡರು. ಅವರನ್ನು ಪಕ್ಷಗಾರರನ್ನು ಮಾಡಲು ತೊಂದರೆ ಇರಲಿಲ್ಲ. ಅವರಿಗೆ ಹುಷಾರಿರಲಿಲ್ಲ. ಆ ಬಗ್ಗೆ ನಾನು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಅವರು ಚೆನ್ನಾಗಿದ್ದರು ಸಹ ಪರಿಹಾರ ಹಣ ನೀಡಬೇಕಾಗುತ್ತದೆಂಬ ದುರುದ್ದೇಶದಿಂದ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರುಗಳ ವಯಸ್ಸನ್ನು ತೋರಿಸಲು ಆಧಾರ್ ಕಾರ್ಡ್ ಗಳನ್ನು ಹಾಜರು ಪಡಿಸಿರುತ್ತೇನೆ. ನಮ್ಮ ದಾಖಲೆಗಳ ಪ್ರಕಾರ 1 ರಿಂದ 3 ನೇ ಅರ್ಜಿದಾರರ ವಯಸ್ಸು 5 ವರ್ಷ ಹೆಚ್ಚಾಗುತ್ತದೆ ಎಂದರೆ ಸರಿ. ನನ್ನ ಯಜಮಾನರ ಆಧಾರ್ ಕಾರ್ಡ್ ಹಾಗೂ ಡಿ.ಎಲ್ ಹಾಜರು ಪಡಿಸಿದ್ದೇನೆ. ಅವರ ವಯಸ್ಸು 55 ಎಂದು ಕಾಣಿಸಿದ್ದೇವೆ. ನಿಪಿ. 11 ಮತ್ತು 12 ರ ಪ್ರಕಾರ ನನ್ನ ಯಜಮಾನರ ವಯಸ್ಸು 60 ಆಗಿದೆ ಎಂದರೆ ಸರಿಯಲ್ಲ. ನಿಪಿ. 15 ರ ಪ್ರಕಾರ ನನ್ನ ಯಜಮಾನರಿಗೆ 60 ವರ್ಷ ತೋರಿಸುತ್ತದೆ ಎಂದರೆ ಸರಿಯಲ್ಲ. ನನ್ನ ಯಜಮಾನರಿಗೆ 60 ವರ್ಷ ಆಗಿದ್ದು ಹೆಚ್ಚಿನ ಪರಿಹಾರಕ್ಕಾಗಿ ಅರ್ಜಿದಾರರ ಹಾಗೂ ಮೃತರ ವಯಸ್ಸನ್ನು ಕಡಿಮೆ ಕಾಣಿಸಿದ್ದೇವೆ ಎಂದರೆ ಸರಿಯಲ್ಲ.

2. ಅಪಘಾತವನ್ನು ನಾನು ನೋಡಿಲ್ಲ. ಅಪಘಾತದ ಬಗ್ಗೆ ರಾಜೇಶ್ ಜೈನ್ ನನಗೆ ಮಾಹಿತಿ ಕೊಟ್ಟರು. ಪಿರ್ಯಾದುದಾರರ ಅಂಗಡಿಯಲ್ಲಿ ನನ್ನ ಯಜಮಾನರು ಕೆಲಸ ಮಾಡುತ್ತಿದ್ದರು. ಕೂಡಲೇ ಅಪಘಾತ ಸ್ಥಳಕ್ಕೆ ತೆರಳಿದ್ದು ಪಿರ್ಯಾದುದಾರರನ್ನು ಬೇಟಿ ಮಾಡಿರುತ್ತೇನೆ. ಸಾಕ್ಷಿಯು ಮುಂದುವರೆದು ದೂರುದಾರರನ್ನು ನಾನು ಆಸ್ಪತ್ರೆಯಲ್ಲಿ ನೋಡಿದ್ದು ಅಪಘಾತದ ಬಗ್ಗೆ ಅವರಲ್ಲಿ ವಿಚಾರಿಸಿದ್ದೇನೆ ಎಂದು ಉತ್ತರಿಸಿರುತ್ತಾರೆ. ದೂರುದಾರರಿಗೆ ಅಪಘಾತದ ಬಗ್ಗೆ ಸ್ಥಳೀಯರು ಮಾಹಿತಿ ನೀಡಿರುತ್ತಾರೆ. ಸ್ಥಳೀಯರೇ ನನ್ನ ಗಂಡನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ನಾನು ಆಸ್ಪತ್ರೆಗೆ ಹೋದಾಗ ಅವರು ಹಾಜರಿದ್ದು ಅವರನ್ನು ನಾನು ಮಾತನಾಡಿಸಿರುವುದಿಲ್ಲ.

ನಾನು ಅಪಘಾತ ಆದ ಬಗ್ಗೆ ಗಾಬರಿಗೊಂಡು ಅಪಘಾತ ಹೇಗೆ ಆಯಿತು ಎಂದು ಆಸ್ಪತ್ರೆಯಲ್ಲಿ ಯಾರೋಂದಿಗೂ ವಿಚಾರಿಸಿಲ್ಲ ಎಂದರೆ ಸರಿಯಲ್ಲ. ಪಿರ್ಯಾದುದಾರರನ್ನು ವಿಚಾರಿಸಿದ್ದು ಅವರು ಮಾಹಿತಿ ನೀಡಿರುತ್ತಾರೆ. ಪಿರ್ಯಾದುದಾರರಿಗೆ ಆಸ್ಪತ್ರೆಯಲ್ಲಿದ್ದ ಸ್ಥಳೀಯರು ಮಾಹಿತಿ ನೀಡಿರುತ್ತಾರೆ. ನನ್ನ ಯಜಮಾನರು ಒಂದು ದಿನ ಒಳರೋಗಿಯಾಗಿದ್ದು ಮರುದಿನ ತೀರಿಹೋಗಿರುತ್ತಾರೆ. ಅವರ ವೈದ್ಯಕೀಯ ಖರ್ಚಿನ ಬಗ್ಗೆ ದಾಖಲೆ ಹಾಜರು ಪಡಿಸಿದ್ದೇನೆ. ನಾನು ಯಾವುದೇ ದಾಖಲೆಗಳನ್ನು ಕೊಡದೇ ಇದ್ದರೂ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರಕ್ಕಾಗಿ ನಾನು ಒಂದು ಲಕ್ಷ ವೈದ್ಯಕೀಯ ಖರ್ಚು ಮಾಡಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿಯೇ ವೈದ್ಯಕೀಯ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

3. ಗೋಪಾಲಗೌಡ ಆಸ್ಪತ್ರೆ ಸುಮಾರು ವರ್ಷದಿಂದ ಗೊತ್ತಿದೆ. ಅದು ನಮ್ಮ ಮನೆಗೆ ಗೊತ್ತಿದೆ. ಸದರಿ ಆಸ್ಪತ್ರೆಯ ಹಿಂಭಾಗ ಗಾಯತ್ರಿ ಪುರಂ ಇದೆ. ಅಂದಾಜು ನಮ್ಮ ಮನೆಯಿಂದ ಆಸ್ಪತ್ರೆ 4 ಕಿ.ಮೀ ದೂರ ಇರಬಹುದು. ಅದು ಅರ್ಧ ಕಿ.ಮೀ ಇದ್ದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ಪತ್ರೆಯಿಂದ ಮೃತರನ್ನು ಮನೆಗೆ ಆಂಬೂಲೆನ್ಸ್ ನಲ್ಲಿ ಕರೆದುಕೊಂಡು ಹೋಗಿರುತ್ತೇವೆ. ಸರ್ಕಾರಿ ಆಂಬೂಲೆನ್ಸ್ ಎಂದರೆ ಗೊತ್ತಿಲ್ಲ. ಆದ ಕಾರಣ ನಾನು ಆಂಬೂಲೆನ್ಸ್ ಖರ್ಚನ್ನು ಐವತ್ತು ಸಾವಿರ ಸುಳ್ಳಾಗಿ ಕೇಳಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ನಂತರ ಮತ್ತೆ ಸದರಿ ಆಸ್ಪತ್ರೆಗೆ ಹೋಗಿರುವುದಿಲ್ಲ. ನಮ್ಮ ವಾಹನದಲ್ಲೇ ಆಸ್ಪತ್ರೆಗೆ ಹೋಗಿದ್ದೇವು. ಆಸ್ಪತ್ರೆಗೆ ಓಡಾಡಲು ಐವತ್ತು ಸಾವಿರ ಎಂದು ಸುಳ್ಳಾಗಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಮೃತರ ಅಂತ್ಯಕ್ರಿಯೆ ಬಗ್ಗೆ ಅಂದಾಜು 10,000/- ಖರ್ಚಾಗಿದ್ದು ಹೆಚ್ಚಿನ ಪರಿಹಾರಕ್ಕಾಗಿ ರೂ. 1,00,000/- ಕೇಳಿದ್ದೇವೆ ಎಂದರೆ ಸರಿಯಲ್ಲ.

4. ನನ್ನ ಯಜಮಾನರು ಚಲಾಯಿಸುತ್ತಿದ್ದ ವಾಹನ ಅವರ ಅಂಗಡಿ ಮಾಲೀಕರಿಗೆ ಸೇರಿದ್ದು. ಅಪಘಾತದ ದಿನವೇ ನನ್ನ ಯಜಮಾನರು ಕೊನೆಯದಾಗಿ ಕೆಲಸ ಮಾಡಿದ್ದಾರೆ. ನಾವು

ನೀಡಿರುವ ದೃಢಪತ್ರದ ಪ್ರಕಾರ ನನ್ನ ಯಜಮಾನರಿಗೆ ರೂ. 19,150/- ಸಂಬಳ ನಿಪಿ. 17 ರಂತೆ ಬರುತ್ತಿತ್ತು ಎಂದರೆ ಸಾಕ್ಷಿಯು ಅವರಿಗೆ ಕಮೀಷನ್ ನಿಂದ ಆದಾಯ ಇತ್ತು ಎಂದು ತೋರಿಸಿರುತ್ತಾರೆ. ಈ ಬಗ್ಗೆ ದಾಖಲೆ ಹಾಜರುಪಡಿಸಿರುವುದಿಲ್ಲ. ಮೃತರಿಗೆ ರೂ. 40,000/- ಆದಾಯ ಇತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಯಜಮಾನರು ಅಪಘಾತದ ಸಂದರ್ಭದಲ್ಲಿ ಕೆಲಸ ಬಿಟ್ಟಿದ್ದರು ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಕಲಾವಕಾಶ ಕೋರಿದ್ದು ಪಾಟೀ ಸವಾಲಿಗೆ ಮುಂದೂಡಲಾಯಿತು.)

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.